ಡಿಡಬ್ಲ್ಯೂ-1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ: 26-07-2022

**ಪಾಟೀ ಸವಾಲು ಃ ಶ್ರೀ. ಎ.ಆರ್.ಎಸ್.ಆರ್ ವಾದಿ ಪರ ವಕೀಲರು**

**2015 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಅದೇಶದಂತೆ 13 ಆಸ್ತಿಗಳನ್ನು ಪ್ರತಿದಾವೆಯಲ್ಲಿ ಸೇರಿಸಿ ಪರಿಹಾರ ಕೋರಿದ್ದೇವೆ ಎಂದರೆ ಸರಿ. ಪ್ರತಿವಾದಿ 5 ರಿಂದ 8 ರವರು ಸದರಿ ಆಸ್ತಿಗಳಲ್ಲಿ 4/8 ನೇ ಭಾಗ ಬರಬೇಕೆಂದು ಅದರ ಮೌಲ್ಯ 20 ಲಕ್ಷ ಬಾಳುತ್ತದೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ಸದರಿ ಪ್ರತಿದಾವೆ ಆಸ್ತಿಗಳ ಮೌಲ್ಯ 2015 ರಲ್ಲಿ ಎಷ್ಟು ಇತ್ತು ಗೊತ್ತಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣಿಳ ಪತ್ರದಲ್ಲಿ ಸುಮಾರು 2 ಲಕ್ಷ ಬೆಲೆ ಬಾಳುತ್ತದೆ ಎಂದು ತಿಳಿಸಿರುತ್ತೇನೆ. ಆ ರೀತಿ ಬೆಲೆಬಾಳುತ್ತದೆ ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳ ಮೌಲ್ಯ ಅಂದಾಜಿನ ಮೇಲೆ ಹೇಳುತ್ತಿದ್ದೇನೆ. ಪ್ರತಿದಾವೆ ಆಸ್ತಿಗಳಿವಿಗೆ ಸಂಬಂಧಿಸಿದಂತೆ ವಾದಿಯರು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಗ್ರಾಮಠಾಣಾ ಆಸ್ತಿ ಒಟ್ಟು 30 ಗುಂಟೆ ಇರುತ್ತದೆ. ಪ್ರತಿದಾವೆಯನ್ನು ನಾವು ಒಟ್ಟು 13 ಆಸ್ತಿಗಳಲ್ಲಿ 12 ಗ್ರಾಮಠಾಣಾ ಮತ್ತು 1 ವ್ಯವಸಾಯ ಜಮೀನು ಎಂದರೆ ಸರಿಯಲ್ಲ. ಗ್ರಾಮಾಠಾಣಾ ಆಸ್ತಿ ಎಷ್ಟು ಚದರ ಅಡಿಗಳು ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು 50 ಸಾವಿರ ಚದರ ಅಡಿಗೆ ದಾವೆ ಸಲ್ಲಿಸಿದ್ದು, ದಾವೆ ಸಲ್ಲಿಸುವ ಸಮಯದಲ್ಲಿ 1 ಚದರ ಅಡಿಗೆ ರೂ 250 ಬೆಲೆ ಬಾಳುತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿದಾವೆ ಆಸ್ತಿಯ ಬೆಲೆಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಪ್ರತಿದಾವೆಯ ಆಸ್ತಿಗಳು ಸುಮಾರು 2 ಲಕ್ಷ ಬಾಳುತ್ತವೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಭಾಗಕ್ಕೆ ಬರುವ ಆಸ್ತಿಗೆ 2 ಲಕ್ಷ**

ನೀಡಿದರೆ ಬಿಟ್ಟು ಕೊಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಆಗುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ ನನ್ನ ಭಾಗಕ್ಕೆ ಬರುವ ಆಸ್ತಿಯು ಸುಮಾರು 80 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇರುವುದಿಲ್ಲ)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.